# ಬಂಡಾಜೆ ಜಲಪಾತ



ಚಿತ್ರ ಬರಹ:
**ಅಭಿಷೇಕ್ ಡಿ. ಪುಂಡಿತ್ತೂರು**



ಉಜಿರೆಯಿಂದ ಚಾರ್ಮಾಡಿ ಘಾಟಿಯ ಮಾರ್ಗವಾಗಿ ಸಾಗುವಾಗ ಉದ್ದನೆಯ ನೂಲಿನಂತೆ ಕಾಣುವ ಜಲಪಾತವೇ ಬಂಡಾಜೆ ಜಲಪಾತ. ಈ ಜಲಪಾತವನ್ನು ನೋಡಲು ಕಾಡಿನೊಳಗೆ ಚಾರಣ ಮಾಡಬೇಕು.

ಮಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಸಿಗುವ ಪಟ್ಟಣ ಉಜಿರೆ. ಇಲ್ಲಿಂದ ಚಾರ್ಮಾಡಿ ಮಾರ್ಗವಾಗಿ ಸುಮಾರು ಆರೇಳು ಕಿಲೋಮೀಟರ್ ಕ್ರಮಿಸಿದರೆ ಸೋಮಂತಡ್ಕ ಎಂಬ ಸಣ್ಣ ಪೇಟೆ ಎದುರಾಗುತ್ತದೆ. ಬಂಡಾಜೆಯ ಸೌಂದರ್ಯ ಕಾಣಲು ಇಲ್ಲಿ ಎಡಕ್ಕೆ ತಿರುಗಿ 16 ಕಿ.ಮೀ ಸಾಗಬೇಕು. ನಂತರ ಮುಂಡಾಜೆ ಎಂಬ ಗ್ರಾಮ. ಸಮೀಪದ ಕಡಿರುದ್ಯಾವರದ ಒಳಂಬ್ರ ನಾರಾಯಣ ಗೌಡರ ಮನೆಯಿಂದ ಚಾರಣದ ಹಾದಿ ಆರಂಭವಾಗುತ್ತದೆ. ಗೌಡರ ಮನೆ ತಲುಪಲು ಉಜಿರೆಯಿಂದ ಜೀಪಿನ ವ್ಯವಸ್ಥೆ ಮಾಡಬಹುದು.

ಜಲಪಾತವು ರಕ್ಷಿತಾರಣ್ಯದಲ್ಲಿ ಇರುವುದರಿಂದ 200 ರೂ. ಪ್ರವೇಶ ಶುಲ್ಕ, ನಿಮ್ಮ ಮನೆ ವಿಳಾಸ ಎಲ್ಲಾ ಕೊಡಬೇಕಾಗಿ ಬರಬಹುದು. ಗೈಡ್ ಇಲ್ಲದೇ ಸಾಗುವುದು ಅಪಾಯವೇ ಸರಿ. ಸ್ಥಳೀಯರ ನೆರವಿನೊಂದಿಗೆ ಮುನ್ನಡೆಯಬಹುದು. ಒಂದೇ ದಿನದಲ್ಲಿ ಈ ಜಲಪಾತ ನೋಡಿ ಬರಲು ಅಸಾಧ್ಯ. ಅಹಾರ ಇತ್ಯಾದಿ ವ್ಯವಸ್ಥೆ ಸ್ವತಃ ಮಾಡಿಕೊಂಡು ಸಾಗುವುದು ಅನಿವಾರ್ಯ.

ಮುಂಡಾಜೆ ಮತ್ತು ಆಸುಪಾಸಿನ ಗ್ರಾಮಗಳಿಗೆ ಈ ಜಲಪಾತದ ನೀರು ಜೀವಧಾರೆ. ಗೌಡರ ಮನೆಯಿಂದ ಕೊಂಚ ದೂರ ಸಾಗುವಾಗ ಉಳ್ಳಾಳ್ತಿ ಅಮ್ಮನವರ ಗುಡಿ. ಅಡವಿಯಲ್ಲಿ ಒಂದೆರಡು ಕಿ.ಮೀ ಮುಂದೆ ಸಾಗುತ್ತಿದ್ದಂತೆಯೇ ಸಣ್ಣ ತೊರೆ ಕಾಣುತ್ತದೆ. ಇದು ಜಲಪಾತದಿಂದ ಬರುವ ನೀರಿನ ಹಾದಿ. ಚಾರಣಿಗರು ಮಧ್ಯಾಹ್ನದ ಊಟ ಇತ್ಯಾದಿಗಳನ್ನು ಇಲ್ಲೇ ಮುಗಿಸಿದರೆ ಉತ್ತಮ! ಯಾಕೆಂದರೆ ಮುಂದೆ ನೀರು ಸಿಗದು!

ಇದರ ಬಳಿಕ ಹಾದಿ ಇನ್ನಷ್ಟು ಕ್ಲಿಷ್ಟ. ದಟ್ಟಡವಿಯ ನಡುವೆ ಜಾಗರೂಕತೆಯಿಂದ

(8ನೇ ಪುಟ ನೋಡಿ)